1.

# ಅಡಿಗಾ ಪ್ರಾಜೆಕ್ಟ್ ಚಟುವಟಿಕೆಯ ವಿಷಯ.

ಅಡಿಗಾ ಪ್ರಾಜೆಕ್ಟ್ ಮಾಡಲು ನಾವು ಮೊದಲು ಕೊಟ್ಟಿರುವಂಥ ಪ್ರಶ್ನೆ ಪತ್ರಿಕೆ ಓದಿಕೊಂಡು ಅದರಲ್ಲಿ ಡಾಕ್ಯುಮೆಂಟ್ ಬರೆಯುವುದು, ಡಾಕ್ಯುಮೆಂಟ್ ಬರೆಯಲು ಎಂ. ಎಸ್. ವರ್ಡ್ ಓಪನ್ ಮಾಡಿಕೊಂಡು ಅದರಲ್ಲಿ ಡಾಕ್ಯುಮೆಂಟ್ ಬರೆಯಬೇಕು. ಬರೆದ ನಂತರ ಅದಕ್ಕೆ ಹೆಡ್ ಲೈನ್‌ಗೆ ಬೋಲ್ಡ್ ಮಾಡಿ ಕಲರ್ ಹಾಕಿ, ಅಂಡರ್ ಲೈನ್‌ಮಾಡಿ ಮುಂದಿನ ವಿಷಯವನ್ನು ಬರೆಯುವುದು. ನಂತರ ಅದರ ಸ್ಟೈಲಿಷ್ ಬದಲಿಸಿ ಫಾಂಟ್ ಸೈಜ್ , ಕಲರ್ ಹಾಕಿ, ಲೈನ್ ಅಲೈನ್‌ಮೆಂಟಲ್ಲಿ ಜಸ್ಟಿಫೈ ಮಾಡಿ , ಎಲ್ಲ ಸೆಲೆಕ್ಟ್ ಮಾಡಿ ಬಾರ್ಡರ್ ಹಾಕುವುದು. ನಂತರ ಎಲ್ಲಾ ಆದ ಮೇಲೆ ನಾವು ಬರೆದಿರುವ ಡಾಕ್ಯುಮೆಂಟನ್ನು ಫೈಲ್‌ನಲ್ಲಿ ಉಳಿಸಿಕೊಳ್ಳುವುದು.

2. ಈಗ ಎಕ್ಸೆಲ್‌ನಲ್ಲಿ ಟೇಬಲ್ ಹಾಕಿಕೊಳ್ಳುವುದು. ಆಮೇಲೆ ಸ್ಪ್ರೆಡ್‌ಶೀಟ್‌ನಲ್ಲಿ ಜನಸಂಖ್ಯೆ ಎಷ್ಟಿದ್ದಾರೆ ಎಂದು ಒಂದು ಅಂದಾಜಿನ ಮೇಲೆ ಬರೆಯುವುದು. ಅಲ್ಲಿ ಬರೆದಿರುವಂಥಹ ಜನಸಂಖ್ಯೆಯಲ್ಲಿ ಎಷ್ಟು ಜನ ಬಡವರು, ಕೂಲಿ ಕಾರ್ಮಿಕರು, ನಿರ್ಗತಿಕರು, ಶ್ರೀಮಂತರು ಎಷ್ಟು ಜನರಿದ್ದಾರೆ ಎಂದು ಒಂದು ಪಟ್ಟಿ ಮಾಡಿಕೊಳ್ಳುವುದು. ನಂತರ ಇನ್ನೊಂದು ಕಾಲಂನಲ್ಲಿ ಯಾವ ಯಾವ ರೀತಿಯ ಊಟ ಮತ್ತು ತಿಂಡಿ ಸಿಗುತ್ತದೆ ಎಂದು ಬರೆಯುವುದು, ಮತ್ತೊಂದರಲ್ಲಿ ಊಟ ಮತ್ತು ತಿಂಡಿಯ ಬೆಲೆಯನ್ನು ಹಾಕುವುದು, ಇನ್ನೊಂದರಲ್ಲಿ ವರ್ಷಕ್ಕೆ ಯಾರ್‍ಯಾರು ಎಷ್ಟು ತಿಂದಿದ್ದಾರೆ ಎಂದು ಸೂತ್ರವನ್ನು ಉಪಯೋಗಿಸಿಕೊಂಡು ಲೆಕ್ಕ ತಿಳಿಯುವುದು. ಇದಕ್ಕೂ ಕಲರ್, ಮರ್ಜ್, ಅಲೈನ್‌ಮೆಂಟ್ ಎಲ್ಲ ಮಾಡಿ ನಂತರ ಫೈಲ್ ಅನ್ನು ಉಳಿಸಿಕೊಳ್ಳುವುದು.

3. ಈಗ ಗೂಗಲ್ ಓಪನ್ ಮಾಡಿಕೊಂಡು ಮೇಲ್ ಬಾಕ್ಸ್ ಅನ್ನು ಓಪನ್ ಮಾಡಿಕೊಂಡು ಬ್ಯಾಂಕ್ ಮ್ಯಾನೇಜರ್ ಅವರ ಇ- ಮೇಲ್ ವಿಳಾಸಕ್ಕೆ ಅಟ್ಯಾಚ್ ಫೈಲ್‌ಗೆ ಹೋಗಿ ಈಗಾಗಲೇ ಬರೆದಿರುವಂಥ ಡಾಲ್ಯಮೆಂಟ್ ಇರುತ್ತದೆ ಅದನ್ನು ಸೆಲೆಕ್ಟ್ ಮಾಡಿಕೊಂಡು ಮೆಸೇಜ್ ಸೆಂಟ್ ಮಾಡಿದರೆ ಅದು ಶ್ಯಾಂ ಸುಂದರ್ ಬ್ಯಾಂಕ್ ಮ್ಯಾನೇಜರ್‌ಗೆ ತಲುಪುತ್ತದೆ.

4. ಈಗ ಪವರ್ ಪಾಯಿಂಟ್ ಸ್ಲೈಡ್ ಓಪನ್ ಮಾಡಿಕೊಂಡು, ಸುಮಾರು 7-8 ಸ್ಲೈಡ್‌ನಲ್ಲಿ ಅಡಿಗರ ಬಾವಚಿತ್ರವನ್ನು ಒಂದು ಸ್ಲೈಡ್‌ನಲ್ಲಿ ಇನ್ಸರ್ಟ್ ಮಾಡಿ , ಹಾಗೆಯೇ ಅದರ ಸಂಬಂಧಪಟ್ಟ ಚಿತ್ರಗಳು ಉಳಿದ ಸ್ಲೈಡ್‌ಗೆ ಇನ್ಸರ್ಟ್ ಮಾಡಿ ಅದಕ್ಕೆ ಬ್ಯಾಕ್ ಗ್ರೌಂಡ್ ಕಲರ್ ಡಿಸೈನ್ಸ್, ಟ್ರಾನ್ಸಿಷನ್ಸ್, ಅನಿಮೇಷನ್, ಸಮಯ ಎಲ್ಲವನ್ನೂ ಅಡ್ಜೆಸ್ಟ್ ಮಾಡಿ ಕೊನೆಗೆ ಸ್ಲೈಡ್ ಷೋ ತೋರಿಸುವುದು.